ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

# HASSAN INSTITUTE OF MEDICAL SCIENCES, HASSAN

**(An Autonomous Institute under the Dept of Medical Education)**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699,**

## 10ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು

ದಿನಾಂಕ: 03-01-2011ನೇ ಸೋಮವಾರ,

ಸ್ಥಳ:

ಕೊಠಡಿ ಸಂಖ್ಯೆ:406, ನಾಲ್ಕನೇ ಮಹಡಿ,

ವಿಕಾಸ ಸೌಧ, ಬೆಂಗಳೂರು

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

## 10ನೇ ಆಡಳಿತ ಮಂಡಳಿ ಸಭೆ

**ದಿನಾಂಕ: 03-01-2011** **ಸಮಯ: ಪೂರ್ವಾಹ್ನ 10-15**

**ಸ್ಥಳ: ವಿಕಾಸ ಸೌಧ, ಬೆಂಗಳೂರು.**

*****

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 10ನೇ ಆಡಳಿತ ಮಂಡಳಿ ಸಭೆಯನ್ನು ಕರ್ನಾಟಕ ಸರ್ಕಾರದ ವೈದ್ಯಕೀಯ ಶಿಕ್ಷಣ ಸಚಿವರಾದ ಸನ್ಮಾನ್ಯ ಶ್ರೀ. ಎ. ರಾಮದಾಸ್, ಅಧ್ಯಕ್ಷರು, ಆಡಳಿತ ಮಂಡಳಿ ಸಭೆ, ಹಿಮ್ಸ್, ಹಾಸನ ಇವರ ಘನಾಧ್ಯಕ್ಷತೆಯಲ್ಲಿ ನಿಗದಿಪಡಿಸಲಾಗಿದೆ.

**ಮೇಲ್ಕಂಡ ಸಭೆಯಲ್ಲಿ ಹಾಜರಿದ್ದ ಸನ್ಮಾನ್ಯರು**

| | | | |
|---|---|---|---|
| 01 | ಸನ್ಮಾನ್ಯ ಶ್ರೀ. ಎ. ರಾಮದಾಸ್, ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಅಧ್ಯಕ್ಷರು,ಆಡಳಿತ ಮಂಡಳಿ, ಹಿಮ್ಸ್, ಹಾಸನ | ಅಧ್ಯಕ್ಷರು | ಹಾಜರಿದ್ದರು |
| 02 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ ) ವಿಧಾನ ಸೌಧ, ಬೆಂಗಳೂರು. | ಉಪಾಧ್ಯಕ್ಷರು | ಹಾಜರಿದ್ದರು |
| 03 | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು | ಸದಸ್ಯರು | ಹಾಜರಿದ್ದರು |
| 04 | ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು. | ಸದಸ್ಯರು | ಗೈರುಹಾಜರು |
| 05 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ, ಬಹು ಮಹಡಿಗಳ ಕಟ್ಟಡ, ಬೆಂಗಳೂರು. | ಸದಸ್ಯರು | ಗೈರುಹಾಜರು |
| 06 | ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ, ಆನಂದರಾವ್ ವೃತ್ತ, ಬೆಂಗಳೂರು, | ಸದಸ್ಯರು | ಗೈರುಹಾಜರು |

| | | | |
|---|---|---|---|
| 07 | ಕುಲಪತಿಗಳು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ, 4ನೇ ಹಂತ, ಜಯನಗರ, 4-ಟಿ ಬ್ಲಾಕ್, ಬೆಂಗಳೂರು. | ಸದಸ್ಯರು | ಹಾಜರಿದ್ದರು |
| 08 | ಸರ್ಕಾರದ ಉಪ ಕಾಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವೈದ್ಯಕೀಯ ಶಿಕ್ಷಣ, ವಿಕಾಸಸೌಧ, ಬೆಂಗಳೂರು. | ಸದಸ್ಯರು | ಗೈರುಹಾಜರು |
| 09 | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿದ್ದರು |
| 10 | ಮುಖ್ಯ ಅಭಿಯಂತರರು, ಸಿ & ಬಿ, ಬೆಂಗಳೂರು. | ಸದಸ್ಯರು | ಗೈರುಹಾಜರು |
| 11 | ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ. | ಸದಸ್ಯರು | ಹಾಜರಿದ್ದರು |
| 12 | ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ. | ಸದಸ್ಯರು | ಗೈರುಹಾಜರು |
| 13 | ವೈದ್ಯಕೀಯ ಅಧೀಕ್ಷಕರು, ಶ್ರೀ ಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆ / ಹಿಮ್ಸ್, ಹಾಸನ. | ಸದಸ್ಯರು | ಹಾಜರಿದ್ದರು |
| 14 | ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿದ್ದರು |
| 15 | ಆರ್ಥಿಕ ಅಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯರು | ಹಾಜರಿದ್ದರು |
| 16 | ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ | ಸದಸ್ಯ ಕಾರ್ಯದರ್ಶಿಗಳು | ಹಾಜರಿದ್ದರು |

PSPrasad

ನಿರ್ದೇಶಕರ ಕಛೇರಿ ಹಿಮ್ಸ್ ಹಾಸನ

| ಕ್ರಮ ಸಂ. | ವಿಷಯ | ತೀರ್ಮಾನ |
|---|---|---|
| 01 | ದಿನಾಂಕ:28-08-2010ನೇ ಶನಿವಾರ ನಡೆದ 9ನೇ ಆಡಳಿತ ಮಂಡಳಿ ಸಭಾ ನಡವಳಿಗಳನ್ನು ಓದಿ ರೆಕಾರ್ಡ್ ಮಾಡುವುದು ಹಾಗೂ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದು. | ಈ ವಿಷಯವನ್ನು ದಿ:28-08-2010 ರಂದು ನಡೆದ 9ನೇ ಆಡಳಿತ ಮಂಡಳಿ ಸಭಾ ನಡವಳಿಯ ಬಗ್ಗೆ ಇದ್ದು, ಈ ಸಭೆಯು 27ನೇ ವಿಷಯವಾದ ಹಿಮ್ಸ್ ಸಂಸ್ಥೆಯ ಅಧ್ಯಕ್ಷರ ನೇಮಕದ ಬಗ್ಗೆ ಇದ್ದು, ಡಾ. ರಾಜೀವ್ ಗಾಂಧಿ ಯೂನಿವರ್ಸಿಟಿ ರಿಜಿಸ್ಟ್ರಾರ್‌ರವರ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ 9 ನೇ ಆಡಳಿ ಮಂಡಳಿ ಸಭೆಯಲ್ಲಿ ಈ ವಿಷಯವನ್ನು ಕೂಲಂಕಶವಾಗಿ ಚರ್ಚಿಸಿ ಸಾಂಪ್ರದಾಯಕವಾಗಿ ಸೇವಾ ಹಿರಿತನ ಹೊಂದಿರುವ ಪ್ರಾಧ್ಯಾಪಕರೊಬ್ಬರನ್ನು ಈ ಹುದ್ದೆಗೆ ನೇಮಿಸಿಕೊಂಡಿದ್ದರೂ ಸಹ ಡಾ. ಶಂಕರ್‌ರವರ ಸೇವಾನುಭವದ ಆಧಾರದ ಮೆಲೆ ಇವರನ್ನು ಹಿಮ್ಸ್ ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು/ಜಿಲ್ಲಾ ಶಸ್ತ್ರಚಿಕಿತ್ಸಕರಾಗಿ ನೇಮಿಸಲು ತೀರ್ಮಾನಿಸಿರುವುದರಿಂದ ಸರ್ಕಾರದಿಂದ ಬಂದಿರುವ ಆ.ಕು.ಕ. 264 ಕೆ.ವಿ.ಎಂ. 2010, ದಿ:15-10-2010ರ ಪತ್ರದಲ್ಲಿ ತಿಳಿಸಿರುವಂತೆ ಅತ್ಯಂತ ಹಿರಿಯ ಪ್ರಾಧ್ಯಾಪಕರನ್ನು ಪ್ರಾಧ್ಯಾಪಕರ ವಿಭಾಗದ ಮುಖ್ಯಸ್ಥ ಕಾರ್ಯಭಾರಗಳ ಜೊತೆಗೆ ಎಂ.ಸಿ.ಐ. ನಿಯಮಾವಳಿಯಂತೆ ವೈದ್ಯಕೀಯ ಅಧೀಕ್ಷಕರನ್ನಾಗಿ ಪದನಾಮಿಕರಿಸಿಕೊಳ್ಳಬೇಕೆಂದಿದ್ದರೂ ಸಹ ಸೇವಾನುಭವದ ಆಧಾರದ ಮೇಲೆ ಡಾ. ಶಂಕರ್‌ರವರನ್ನು ಹಾಸನ ವೈದ್ಯಕೀಯ ವಿಜ್ಞಾನಗಳ ಬೋಧಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು/ಜಿಲ್ಲಾ ಶಸ್ತ್ರಚಿಕಿತ್ಸಕರಾಗಿ ಮುಂದುವರೆಸಲು ಸರ್ವಾನುಮತದಿಂದ ತೀಮಾನಿಸಲಾಯಿತು. |

ನಿರ್ದೇಶಕರ ಕಛೇರಿ * ಹಿಮ್ಸ್ ಹಾಸನ *

| 02 | **ವಿಷಯ:-** ದಿನಾಂಕ:20-12-2010 ರಂದು ನಡೆದ ಬೋಧಕ ಸಿಬ್ಬಂದಿ ನೇಮಕಾತಿಯ ನೇರ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸುವುದು. |
|---|---|

**ಸಂಕ್ಷಿಪ್ತ ವರದಿ**

ದಿನಾಂಕ:20-12-2010 ರಂದು ಎಂ.ಸಿ.ಐ. ತಪಾಸಣೆ ನಿಮಿತ್ತ ಸಂಸ್ಥೆಯಲ್ಲಿ ಖಾಲಿ ಇರುವ ಸಿಬ್ಬಂದಿಯವರ ನೇಮಕಾತಿಗಾಗಿ ಸರ್ಕಾರದ ಅನುಮೋದನೆಯನ್ನು ಪಡೆದು 6 ಪ್ರಾಧ್ಯಾಪಕರ ಹುದ್ದೆ, 5 ಸಹ ಪ್ರಾಧ್ಯಾಪಕರ ಹುದ್ದೆ, 7 ಸಹಾಯಕ ಪ್ರಾಧ್ಯಾಪಕರ ಹುದ್ದೆಗಳು, 8 ಹಿರಿಯ ಸ್ಥಾನಿಕ ವೈದ್ಯರು ಮತ್ತು 30 ಕಿರಿಯ ಸ್ಥಾನಿಕರ ಹುದ್ದೆಗೆ ನೇರ ಸಂದರ್ಶನವನ್ನು ನಡೆಸಿ, ಸಂದರ್ಶನಕ್ಕೆ ಹಾಜರಿದ್ದ ಅಭ್ಯರ್ಥಿಗಳ ಪೈಕಿ 4 ಪ್ರಾಧ್ಯಾಪಕರು, 1 ಸಹ ಪ್ರಾಧ್ಯಾಪಕರು, 4 ಸಹಾಯಕ ಪ್ರಾಧ್ಯಾಪಕರು, 3 ಹಿರಿಯ ಸ್ಥಾನಿಕ ವೈದ್ಯರ 5 ಕಿರಿಯ ಸ್ಥಾನಿಕ ವೈದ್ಯರನ್ನು ನಿಯಮಾನುಸಾರ ಭರ್ತಿ ಮಾಡಲಾಗಿದೆ. ಆಯ್ಕೆಯಾದ ವೈದ್ಯರುಗಳ ಪಟ್ಟಿಯನ್ನು ಲಗತ್ತಿಸಿದೆ. ಸದರಿ ಆಯ್ಕೆ ಪಟ್ಟಿಯನ್ನು ಅನುಮೋದಿಸಬೇಕೆಂದು ಆಡಳಿತ ಮಂಡಳಿಯನ್ನು ಕೋರಿದೆ.

ದಿನಾಂಕ:20-12-2010 ರಂದು ನಡೆದ ಬೋಧಕ ಸಿಬ್ಬಂದಿ ನೇಮಕಾತಿಯ ನೇರ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿಯನ್ನು ಅನುಮೋದಿಸುವುದು.

| ಕ್ರ.ಸಂ | ಅಭ್ಯರ್ಥಿಯ ಹೆಸರು | ಆಯ್ಕೆಯಾದ ಹುದ್ದೆ | ವಿಭಾಗ |
|---|---|---|---|
| 01 | ಡಾ. ಸಿ.ಆರ್. ಸುದರ್ಶನ್ | ಪ್ರಾಧ್ಯಾಪಕರು | ಶರೀರ ಕ್ರಿಯಾ ಶಾಸ್ತ್ರ |
| 02 | ಡಾ.ಎಸ್.ನಾಗೇಂದ್ರನ್ | ಪ್ರಾಧ್ಯಾಪಕರು | ಮಾನಸಿಕ ರೋಗ ವಿಭಾಗ |
| 03 | ಡಾ. ಡಿ.ಕೆ. ಗೋವಿಂದರಾಜು | ಪ್ರಾಧ್ಯಾಪಕರು | ಕೀಲು ಮತ್ತು ಮೂಳೆ ವಿಭಾಗ |
| 04 | ಡಾ. ಶಂಕರ್ | ಪ್ರಾಧ್ಯಾಪಕರು | ರೇಡಿಯೋಲಜಿ ವಿಭಾಗ |
| 05 | ಡಾ. ಮನುಪ್ರಕಾಶ್ | ಸಹ ಪ್ರಾಧ್ಯಾಪಕರು | ಮಕ್ಕಳ ಚಿಕಿತ್ಸಾ ವಿಭಾಗ |
| 06 | ಡಾ. ಸೀಮಾ ಬಿಜ್ಜರಗಿ | ಸಹಾಯಕ ಪ್ರಾಧ್ಯಾಪಕರು | ರೋಗ ಲಕ್ಷಣ ಶಾಸ್ತ್ರ ವಿಭಾಗ |
| 07 | ಡಾ. ಗಂಗಾಧರ ಗೌಡ | ಸಹಾಯಕ ಪ್ರಾಧ್ಯಾಪಕರು | ಅರವಳಿಕೆ ವಿಭಾಗ |
| 08 | ಡಾ. ಶೃತಿ ಜಯರಾಮ್ | ಸಹಾಯಕ ಪ್ರಾಧ್ಯಾಪಕರು | ಅರವಳಿಕೆ ವಿಭಾಗ |

ನಿರ್ದೇಶಕರ ಕಛೇರಿ ಹಿಮ್ಸ್ ಹಾಸನ

| | | | |
|---|---|---|---|
| 09 | ಡಾ. ಸುಮನ. ಎಂ. | ಸಹಾಯಕ ಪ್ರಾಧ್ಯಾಪಕರು | ಸಮುದಾಯ ವೈದ್ಯಶಾಸ್ತ್ರ ವಿಭಾಗ |
| 10 | ಡಾ. ರವಿ ಚಿಕ್ಕಣ್ಣನವರ್ | ಹಿರಿಯ ಸ್ಥಾನಿಕ ವೈದ್ಯರು | ವೈದ್ಯಶಾಸ್ತ್ರ ವಿಭಾಗ |
| 11 | ಡಾ. ಪ್ರತಿಭಾ. ಎನ್ | ಹಿರಿಯ ಸ್ಥಾನಿಕ ವೈದ್ಯರು | ಶಸ್ತ್ರಚಿಕಿತ್ಸಾ ವಿಭಾಗ |
| 12 | ಡಾ. ಪ್ರಶಾಂತ್ ಸ್ವಾಮಿ ಪೂಜಾರ್ | ಹಿರಿಯ ಸ್ಥಾನಿಕ ವೈದ್ಯರು | ಶಸ್ತ್ರಚಿಕಿತ್ಸಾ ವಿಭಾಗ |
| 13 | ಡಾ. ಮನೋಹರ್. ಬಿ.ಕೆ. | ಕಿರಿಯ ಸ್ಥಾನಿಕ ವೈದ್ಯರು | |
| 14 | ಡಾ. ಸುಮ.ಎಸ್. | ಕಿರಿಯ ಸ್ಥಾನಿಕ ವೈದ್ಯರು | |
| 15 | ಡಾ. ಕುಮಾರಸ್ವಾಮಿ | ಕಿರಿಯ ಸ್ಥಾನಿಕ ವೈದ್ಯರು | |
| 16 | ಡಾ. ವಿಜಯಲಕ್ಷ್ಮಿ | ಕಿರಿಯ ಸ್ಥಾನಿಕ ವೈದ್ಯರು | |
| 17 | ಡಾ. ಕಾವ್ಯ .ಕೆ | ಕಿರಿಯ ಸ್ಥಾನಿಕ ವೈದ್ಯರು | |

**ವಿಷಯ 2ರ ತೀರ್ಮಾನ :-** ದಿನಾಂಕ:20-12-2010 ರಂದು ನಡೆದ ಬೋಧಕ ಸಿಬ್ಬಂದಿ ನೇಮಕಾತಿ ನೇರ ಸಂದರ್ಶನದಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ನೇಮಕಾತಿ ಬಗ್ಗೆ ನಡೆದ ಚರ್ಚೆಯಲ್ಲಿ ಅನುಮೋದನೆಗೆ ಮಂಡಿಸಿದ್ದ 17 ಬೋಧಕ ಸಿಬ್ಬಂದಿಯಲ್ಲಿ ನೇರ ಸಂದರ್ಶನದಲ್ಲಿ ಆಯ್ಕೆ ಆದ 17 ಸಿಬ್ಬಂದಿಗಳ ನೇಮಕಾತಿಯನ್ನು ಸರ್ವಾನುಮತದಿಂದ ಅನುಮೋದಿಸಲು ಸಭೆ ಒಪ್ಪಿಗೆಯನ್ನು ನೀಡಿತು.

03

**ವಿಷಯ :-** 2011ನೇ ಜನವರಿ ಮೊದಲನೇ ವಾರದಲ್ಲಿ ಹಿಮ್ಸ್ ಸಂಸ್ಥೆಗೆ ಮಾನ್ಯತೆ ನೀಡುವ ವಿಷಯದಲ್ಲಿ ಎಂ.ಸಿ.ಐ. ನವರು ಪರಿವೀಕ್ಷಣೆಗೆ ಬರುವವರಿದ್ದು, ಖಾಲಿ ಇರುವ ಕೆಲವು ಬೋಧಕ ಸಿಬ್ಬಂದಿಯನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಿದ್ದು, ಸದರಿ ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

**ಸಂಕ್ಷಿಪ್ತ ವರದಿ**

ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಮುಂಬಡ್ತಿಗೆ ಅರ್ಹರಿರುವ ಬೋಧಕ ಸಿಬ್ಬಂದಿಯವರಿಗೆ ಎಂ.ಸಿ.ಐ. ನಿಯಮಾವಳಿ ಅನುಸಾರ ಅಗತ್ಯವಾಗಿ ತುಂಬಲು ಬೇಕಾಗಿರುವುದರಿಂದ ಖಾಲಿ ಇರುವ ಬೋಧಕ ಹುದ್ದೆಗಳಿಗೆ ಮುಂಬಡ್ತಿ ನೀಡಿರುವ ಬೋಧಕ ಸಿಬ್ಬಂದಿಯ ಮುಂಬಡ್ತಿಯನ್ನು ಅನುಮೋದಿಸುವುದು.

ದಿನಾಂಕ:23-12-2010 ರಂದು ನಡೆದ ಮುಂಬಡ್ತಿ ಪರಿಶೀಲನೆ ಸಮಿತಿ ಸಭೆಯಲ್ಲಿ ತೀರ್ಮಾನಿಸಿದಂತೆ, ಸಂಸ್ಥೆಯಲ್ಲಿ ಖಾಯಂ ಆಗಿ ಸೇವೆ ಸಲ್ಲಿಸುತ್ತಿರುವ 5 ಬೋಧಕ ಸಿಬ್ಬಂದಿಯವರಿಗೆ ಎಂ.ಸಿ.ಐ. ನಿಯಮಾವಳಿ ಅನುಸಾರ ಮುಂಬಡ್ತಿಗೆ ಅರ್ಹರಿದ್ದು, ಸದರಿಯವರ ವಿವರವು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ. | ವೈದ್ಯರ ಹೆಸರು ಮತ್ತು ವಿಭಾಗ | ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆ ಮತ್ತು ವೇತನ ಶ್ರೇಣಿ | ಮುಂಬಡ್ತಿಯ ಹುದ್ದೆ ಮತ್ತು ವೇತನ ಶ್ರೇಣಿ |
|---|---|---|---|
| 01 | ಡಾ. ಡಿ.ಜಿ. ಪ್ರಸನ್ನಕುಮಾರ್, ಮಕ್ಕಳ ಚಿಕಿತ್ಸಾ ವಿಭಾಗ | ಸಹ ಪ್ರಾಧ್ಯಾಪಕರು 16400-450-20000 | ಪ್ರಾಧ್ಯಾಪಕರು 18400-500-22400 |
| 02 | ಡಾ. ರಾಘವೇಂದ್ರ ಪ್ರಸಾದ್. ಕೆ.ಯು., ಕಿವಿ, ಮೂಗು ಮತ್ತು ಗಂಟಲು ವಿಭಾಗ | ಸಹಾಯಕ ಪ್ರಾಧ್ಯಾಪಕರು 12000-420-18300 | ಸಹ ಪ್ರಾಧ್ಯಾಪಕರು 16400-450-20000 |

| | | | |
|---|---|---|---|
| 03 | ಡಾ. ಶ್ರೀರಂಗ, ಕೀಲು ಮತ್ತು ಮೂಳೆ ವಿಭಾಗ | ಸಹಾಯಕ ಪ್ರಾಧ್ಯಾಪಕರು 12000-420-18300 | ಸಹ ಪ್ರಾಧ್ಯಾಪಕರು 16400-450-20000 |
| 04 | ಡಾ. ಕುಮಾರ್ ನಾಯಕ್. ಹೆಚ್., ರೋಗ ಲಕ್ಷಣ ಶಾಸ್ತ್ರ ವಿಭಾಗ | ಸಹಾಯಕ ಪ್ರಾಧ್ಯಾಪಕರು 12000-420-18300 | ಸಹ ಪ್ರಾಧ್ಯಾಪಕರು 16400-450-20000 |
| 05 | ಡಾ. ಮಂಜುನಾಥ್.ಎಸ್., ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ | ಹಿರಿಯ ಸ್ಥಾನೀಯವೈದ್ಯರು 8000-275-13500 | ಸಹಾಯಕ ಪ್ರಾಧ್ಯಾಪಕ 12000-420-18300 |

**ವಿಷಯ 3 ರ ತೀರ್ಮಾನ:-** ಹಾಸನ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಮುಂಬಡ್ತಿಗೆ ಅರ್ಹರಿರುವ ಬೋಧಕ ಸಿಬ್ಬಂದಿಯವರಿಗೆ ಎಂ.ಸಿ.ಐ. ನಿಯಮಾವಳಿ ಅನುಸಾರ ಅಗತ್ಯವಾಗಿ ತುಂಬಲು ಖಲಿ ಇರುವ 5 ಬೋಧಕ ಸಿಬ್ಬಂದಿಗಳಿಗೆ ಮುಂಬಡಿ ನೀಡಬೆಕಾಗಿದ್ದು, ಈ ವಿಷಯದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಂದ ಅನುಮೋದಿಸಲ್ಪಟ್ಟಿದ್ದು, ಪಟ್ಟಿಯಲ್ಲಿರುವ 5 ಹೆಸರುಗಳನ್ನು ಪರಿಶೀಲಿಸಿದ ಸಭೆಯು ವಿವರವಾಗಿ ಚರ್ಚಿಸಿ ಕ್ರ.ಸಂ. 2,3,4 ಹಾಗೂ 5ರಲ್ಲಿ ತಿಳಿಸಿರುವ ಶ್ರೀಯುತ: ಡಾ. ರಾಘವೇಂದ್ರ ಪ್ರಸಾದ್.ಕೆ.ವಿ., ಡಾ. ಶ್ರೀರಂಗ, ಡಾ. ಕುಮಾರ್. ನಾಯಕ್ ಹಾಗೂ ಡಾ. ಮಂಜುನಾಥ್.ಎಸ್. ರವರ ಮುಂಬಡ್ತಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. ಕ್ರ. ಸಂ.1ರಲ್ಲಿರುವ ಡಾ. ಡಿ.ಜಿ ಪ್ರಸನ್ನಕುಮಾರ್ ರವರನ್ನು ಕೇವಲ ಎಂ.ಸಿ.ಐ. ತಪಾಸಣೆಗೆ ಅಗತ್ಯವಾಗಿರುವ ಹುದ್ದೆಯ ಎದುರಿಗೆ ಮಾತ್ರ ಸೇರಿಸಿಕೊಳ್ಳುವಂತೆ ಸಭೆಯು ಸವಾನುಮತದಿಂದ ತೀರ್ಮಾನ ಮಾಡಿದೆ.

4. **ವಿಷಯ:-** ಎಂ.ಸಿ.ಐ. ಉದ್ದೇಶಕ್ಕಾಗಿ ಅತ್ಯಗತ್ಯವಾಗಿ ಬೇಕಾದ ಬೋಧಕೇತರ ಸಿಬ್ಬಂದಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಏಜೆನ್ಸಿ ಮೂಲಕ (ಶಶಿ ಸೆಕ್ಯೂರಿಟೀಸ್, ಬೆಂಗಳೂರು) 147 ಜನ ಸಿಬ್ಬಂದಿ ಅಂದರೆ ಸ್ಟಾಫ್ ನರ್ಸ್, ಟೆಕ್ನೀಷಿಯನ್ಸ್, ಲಿಪಿಕ ನೌಕರರು ಹಾಗೂ 'ಡಿ' ದರ್ಜೆ ನೌಕರರನ್ನು ನಿಯಮಿಸಿಕೊಳ್ಳುವ ಬಗ್ಗೆ.

ನಿರ್ದೇಶಕರ ಕಛೇರಿ ಹಿಮ್ಸ್ ಹಾಸನ

## ಸಂಕ್ಷಿಪ್ತ ವರದಿ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆ ನ್ಯಾಯಲಯದಲ್ಲಿದ್ದು, ಶುಶ್ರೂಷಕರು, ವಿವಿಧ ತಾಂತ್ರಿಕ ಸಿಬ್ಬಂದಿಗಳು ಮತ್ತು ಲಿಪಿಕ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆ ಗೊಳಿಸಿರುವುದರಿಂದ ಸಂಸ್ಥೆ ಮತ್ತು ಬೋಧಕ ಆಸ್ಪತ್ರೆಯ ನಿರ್ವಹಣೆಗೆ ಅನಾನುಕೂಲವಾಗಿರುತ್ತದೆ. ಈ ಬಗ್ಗೆ ದಿನಾಂಕ:19-11-2010 ರಂದು ನಡೆದ ವೈದ್ಯಕೀಯ ಶಿಕ್ಷಣ ಇಲಾಖೆ, ಮಾಸಿಕ ಸಭೆಯಲ್ಲಿ ಚರ್ಚಿಸಿರುತ್ತದೆ. ಸರ್ಕಾರದಿಂದ ಮಂಜೂರತಿ ದೊರೆತಿರುವ ಹುದ್ದೆಗಳು ಹಾಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ, ಹಾಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಮತ್ತು ಈಗ ಅಗತ್ಯವಾಗಿ ಬೇಕಾಗಿರುವ ಸಿಬ್ಬಂದಿಗಳ ಸಂಖ್ಯೆಯ ವಿವಿರವನ್ನು ಈ ಕೂಡ ಲಗತ್ತಿಸಿದೆ.

| ಕ್ರ.ಸಂ | ಹುದ್ದೆಯ ಹೆಸರು | ಮಂಜೂರಾದ ಹುದ್ದೆಗಳು | ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ | ಖಾಲಿ ಹುದ್ದೆಗಳ ಸಂಖ್ಯೆ | ಅವಶ್ಯಕವಾಗಿ ತುಂಬಬೇಕಾದ ಹುದ್ದೆಗಳ ಸಂಖ್ಯೆ |
|---|---|---|---|---|---|
| 01 | ಗ್ರಂಥಪಾಲಕರು | 01 | ---- | 01 | |
| 02 | ಸಹ ಗ್ರಂಥಪಾಲಕರು | 01 | --- | 01 | |
| 03 | ಸಹಾಯಕ ಗ್ರಂಥಪಾಲಕರು | 02 | --- | 02 | |
| 04 | ಸ್ಟೆನೋಗ್ರಾಫರ್ | 06 | --- | 06 | |
| 05 | ಸೀನಿಯರ್ ಟೈಪಿಸ್ಟ್ | 01 | --- | 01 | |
| 06 | ಸ್ಟೋರ್ ಕೀಪರ್/ಕ್ಲರ್ಕ್ | 22 | --- | 22 | 10 |
| 07 | ರೆಕಾರ್ಡ್ ಕೀಪರ್ / ಕ್ಲರ್ಕ್ / ಸ್ಟೆನೋಗ್ರಾಫರ್ | 18 | --- | 18 | 10 |
| 08 | ವೈದ್ಯಕೀಯ ಪ್ರಯೋಗಾಲಯ ತಂತ್ರಜ್ಞರು | 48 | --- | 48 | 20 |

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

| | | | | | |
|---|---|---|---|---|---|
| 09 | ಕ್ಷ-ಕಿರಣ ತಂತ್ರಜ್ಞರು | 07 | --- | 07 | 06 |
| 10 | ಡಯಾಲಿಸಿಸ್ ತಂತ್ರಜ್ಞರು | 04 | --- | 04 | 05 |
| 11 | ಓ.ಟಿ. ತಂತ್ರಜ್ಞರು | 06 | --- | 06 | 06 |
| 12 | ಇ.ಸಿ.ಜಿ. ತಂತ್ರಜ್ಞರು | 01 | -- | 01 | |
| 13 | ಫಿಜಿಯೋಥೆರಪಿಸ್ಟ್ | 02 | --- | 02 | |
| 14 | ಸ್ಪೀಚ್ ಥೆರಪಿಸ್ಟ್ | 02 | --- | 02 | |
| 15 | ರೆಫ್ರಾಕ್ಷನಿಸ್ಟ್ | 01 | --- | 01 | |
| 16 | ಡಂಡಲ್ ತಂತ್ರಜ್ಞರು | 02 | --- | 02 | |
| 17 | ಮೆಡಿಕಲ್ ರೆಕಾರ್ಡ್ ವರ್ಕರ್ಸ್ | 04 | --- | 04 | |
| 18 | ಆರ್ಟಿಸ್ಟ್ / ಮಾಡಲರ್ | 02 | --- | 02 | |
| 19 | ವರ್ಕ್‌ಶಾಪ್ ವರ್ಕರ್ | 06 | --- | 06 | |
| 20 | ಡಾರ್ಕ್ ರೂಂ ಅಸಿಸ್ಟೆಂಟ್ | 04 | --- | 04 | |
| 21 | ವಾಹನ ಚಾಲಕರು | 02 | --- | 02 | |
| 22 | ಡಿಸೆಕ್ಷನ್ ಹಾಲ್ ಅಟೆಂಡರ್ | 06 | --- | 06 | |
| 23 | ಲ್ಯಾಬ್ ಅಸಿಸ್ಟೆಂಟ್ / ಅಟೆಂಡರ್ | 39 | --- | 39 | 30 |
| 24 | ಸ್ಟಾಫ್ ನರ್ಸ್ | 255 | 80 | 175 | 60 |
| | ಒಟ್ಟು: | **442** | **80** | **362** | **147** |

ನಿರ್ದೇಶಕರ ಕಛೇರಿ * ಹಿಮ್ಸ್ ಹಾಸನ *

**ವಿಷಯ 4 ರ ತೀರ್ಮಾನ**:- ಈ ವಿಷಯವನ್ನು ಸಭೆಯಲ್ಲಿ ವಿವರವಾಗಿ ಚರ್ಚಿಸಿದ ನಂತರ ಆಡಳಿತ ಮಂಡಳಿ ಸಭೆಯ ಸದಸ್ಯರು ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ ಇವರಿಗೆ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**5. ವಿಷಯ :-** ಪರಿಷ್ಕೃತ ಎಂ.ಸಿ.ಐ. ನಿಯಮಾವಳಿಯ ಅನುಸಾರ ಹಿಮ್ಸ್ ಸಂಸ್ಥೆಗೆ ಅಗತ್ಯವಿರುವ ಹೆಚ್ಚುವರಿ ಬೋಧಕ ಸಿಬ್ಬಂದಿಯಾದ

1. ಒಂದು ಸಹ ಪ್ರಾಧ್ಯಾಪಕರು ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ
1. ಒಂದು ಸಹಾಯಕ ಪ್ರಾಧ್ಯಾಪಕರು ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ
2. 18 ಹಿರಿಯ ಸ್ಥಾನಿಕರುಗಳ ಹುದ್ದೆಗಳನ್ನು ಹೆಚ್ಚುವರಿಯಾಗಿ ಸೃಜಿಸುವ ಬಗ್ಗೆ.

ಪರಿಷ್ಕೃತ ಎಂ.ಸಿ.ಐ. ನಿಯಮಾವಳಿ ಅನುಸಾರ ಸಂಸ್ಥೆಗೆ ಹೊಸದಾಗಿ ಸೃಜಿಸಬೇಕಾದ ಒಂದು ಸಹ ಪ್ರಾಧ್ಯಾಪಕರು, ಒಂದು ಸಹಾಯಕ ಪ್ರಾಧ್ಯಾಪಕರು, 18 ಹಿರಿಯ ಸ್ಥಾನಿಕ ವೈದ್ಯರ ಹೊಸ ಹುದ್ದೆಗಳನ್ನು ಸೃಜಿಸಿ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸುವುದು.

## ಸಂಕ್ಷಿಪ್ತ ವರದಿ

ಎಂ.ಸಿ.ಐ. ಪರಿಷ್ಕೃತ ನಿಯಮಾನುಸಾರ ವಿವಿಧ ವಿಭಾಗಗಳಲ್ಲಿ ಒಟ್ಟು 20 ಹುದ್ದೆಗಳನ್ನು ಹೊಸದಾಗಿ ಸೃಜಿಸಬೇಕಾಗಿದ್ದು ವಿವರ ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ಹುದ್ದೆಯ ವಿವರ | ವಿಭಾಗ | ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ | | |
|---|---|---|---|---|---|
| | | | ಬೇಕಾಗಿರುವ ಹುದ್ದೆಗಳ ಸಂಖ್ಯೆ | ಹಾಲಿ ಇರುವ ಸಂಖ್ಯೆ | ಸೃಜಿಸಬೇಕಾದ ಹುದ್ದೆಗಳ ಸಂಖ್ಯೆ |
| 1 | 2 | 3 | 4 | 5 | 6 |
| 01 | ಸಹ ಪ್ರಾಧ್ಯಾಪಕರು | ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ | 2 | 1 | 1 |
| 02 | ಸಹಾಯಕ ಪ್ರಾಧ್ಯಾಪಕರು | ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ | 3 | 2 | 1 |
| 03 | ಹಿರಿಯ ಸ್ಥಾನಿಕರು | ಜನರಲ್ ಮೆಡಿಸಿನ್ | 6 | 4 | 2 |
| 04 | ಹಿರಿಯ ಸ್ಥಾನಿಕರು | ಜನರಲ್ ಸರ್ಜರಿ | 6 | 4 | 2 |
| 05 | ಹಿರಿಯ ಸ್ಥಾನಿಕರು | ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ | 3 | 2 | 1 |

ನಿರ್ದೇಶಕರು ಹಿಮ್ಸ್ ಹಾಸನ

| | | | | | |
|---|---|---|---|---|---|
| 06 | ಹಿರಿಯ ಸ್ಥಾನಿಕರು | ಟಿ.ಬಿ. & ಚೆಸ್ಟ್ ಪಲ್ಮನರಿ ಮೆಡಿಸಿನ್ | 2 | 1 | 1 |
| 07 | ಹಿರಿಯ ಸ್ಥಾನಿಕರು | ಡೆರ್ಮಾಟಾಲಜಿ ವೆನರೋಲಜಿ & ಲೆಪ್ರೊಸಿ | 2 | 1 | 1 |
| 08 | ಹಿರಿಯ ಸ್ಥಾನಿಕರು | ಸೈಕಿಯಾಟ್ರಿ | 2 | 1 | 1 |
| 09 | ಹಿರಿಯ ಸ್ಥಾನಿಕರು | ಪೀಡಿಯಾಟ್ರಿಕ್ಸ್ | 3 | 2 | 1 |
| 10 | ಹಿರಿಯ ಸ್ಥಾನಿಕರು | ಆರ್ಥೋಪೀಡಿಕ್ | 3 | 2 | 1 |
| 11 | ಹಿರಿಯ ಸ್ಥಾನಿಕರು | ಇ.ಎನ್.ಟಿ. | 2 | 1 | 1 |
| 12 | ಹಿರಿಯ ಸ್ಥಾನಿಕರು | ಆಪ್ತಮಾಲಜಿ | 2 | 1 | 1 |
| 13 | ಹಿರಿಯ ಸ್ಥಾನಿಕರು | ರೇಡಿಯೋ ಡಯಾಗ್ನೊಸಿಸ್ | 5 | 3 | 2 |
| 14 | ಹಿರಿಯ ಸ್ಥಾನಿಕರು | ಅನೆಸ್ತೇಷಿಯಾ | 8 | 5 | 3 |
| 15 | ಹಿರಿಯ ಸ್ಥಾನಿಕರು | ಡೆಂಟಿಸ್ಟ್ರಿ | 2 | 1 | 1 |
| ಒಟ್ಟು | | | 51 | 31 | 20 |

ಈ ಮೇಲ್ಕಂಡ 20 ಹುದ್ದೆಗಳನ್ನು ಹೊಸದಾಗಿ ಸೃಜಿಸಿ ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಅನುಮತಿಯನ್ನು ಕೋರಿದೆ.

**ವಿಷಯ 5 ರ ತೀರ್ಮಾನ**:- ಈ ವಿಷಯದಲ್ಲಿ ಸರ್ಕಾರಕ್ಕೆ ವಿವರವಾದ ಪ್ರಸ್ತಾವನೆಯನ್ನು ಸಲ್ಲಿಸಲು ಸಂಸ್ಥೆಯ ನಿರ್ದೇಶಕರಿಗೆ ಸೂಚನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

ನಿರ್ದೇಶಕರ ಕಛೇರಿ ಹಿಮ್ಸ್ ಹಾಸನ

**6.ವಿಷಯ :-** ಚತ್ತಿಸ್ ಘಡ್ ರಾಜ್ಯದ ದಂತವಾಡ ಜಿಲ್ಲೆಯಲ್ಲಿ ನಡೆದ ನಕ್ಸಲ್ಲರ ನರಮೇಧಕ್ಕೆ ಬಲಿಯಾದ ಸಿ.ಆರ್.ಪಿ. ಯೋಧ ದಿ|| ಶಿವಪ್ಪ ಇವರ ಪತ್ನಿ ಬಿ.ಎಸ್. ನೇತ್ರಾವತಿ ಇವರು ನೇಮಕವಾಗಿದ್ದು, ಇವರಿಗೆ ದಿನಾಂಕ: ರಿಂದ ವೇತನ ನೀಡಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಚತ್ತಿಸ್ ಘಡ್ ರಾಜ್ಯದ ದಂತವಾಡ ಜಿಲ್ಲೆಯಲ್ಲಿ ನಡೆದ ನಕ್ಸಲ್ಲರ ನರಮೇಧಕ್ಕೆ ಬಲಿಯಾದ ಸಿ.ಆರ್.ಪಿ. ಯೋಧ ದಿ|| ಶಿವಪ್ಪ ಇವರ ಪತ್ನಿ ಬಿ.ಎಸ್. ನೇತ್ರಾವತಿ ರವರಿಗೆ ಸರ್ಕಾರದ ಅನುಮತಿ ಅನುಸಾರ ಡಿ ಗ್ರೂಪ್ ಹುದ್ದೆಗೆ ನೇಮಿಸಿಕೊಳ್ಳ ಲಾಗಿದ್ದು, ಸದರಿಯವರಿಗೆ ವೇತನ ಬಿಡುಗಡೆ ಮಾಡಲು ಅನುಮೋದಿಸುವ ಬಗ್ಗೆ.

**ಸಂಕ್ಷಿಪ್ತ ವರದಿ**

ಶ್ರೀಮತಿ: ನೇತ್ರವಾತಿ .ಬಿ.ಎಸ್ ಕೋಂ ಲೇಟ್ ಶಿವಪ್ಪ , ಚಿಕ್ಕಬಸವನಹಳ್ಳಿ, ಶಾಂತಿಗ್ರಾಮ ಹೋಬಳಿ, ಹಾಸನ ತಾಲ್ಲೊಕು,ಹಾಸನ ಇವರನ್ನು ವೈದ್ಯಕೀಯ ಶಿಕ್ಷಣ ಸಚಿವರು ಹಾಗೂ ಕಾರ್ಯದರ್ಶಿಗಳು ಇವರ ಅನುಮೋದನೆಯನುಸಾರ ಒಂದು ಸಂಖ್ಯಾತಿರಿಕ್ತ ಗ್ರೂಪ್ ಡಿ ಹುದ್ದೆಯನ್ನು (ಅಟೆಂಡರ್) ವೇತನ ಶ್ರೇಣಿ 4800- 100-6000-125=6500-150-7100-175-7275 ರಲ್ಲಿ ನೇಮಕ ಮಾಡಲಾಗಿದ್ದು ಸದರಿಯವರು ದಿನಾಂಕ: 01-07-2010 ರಿಂದ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿಯವರಿಗೆ ವೇತನವನ್ನು ಇದುವರೆವಿಗೂ ಬಿಡುಗಡೆಯಾಗಿರುವುದಿಲ್ಲ ಅದ್ದರಿಂದ ವೇತನ ಬಿಡುಗಡೆ ಮಾಡಲು ಆಡಳಿತ ಮಂಡಳಿಯ ಅನುಮೋದನೆಯನ್ನು ಕೋರಿದೆ.

**ವಿಷಯ 6 ರ ತೀರ್ಮಾನ**:- ಸಭೆಯಲ್ಲಿ ಚರ್ಚಿಸಿದ ನಂತರ ಸದರಿಯವರಿಗೆ ವೇತನವನ್ನು ಬಿಡುಗಡೆ ಮಾಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**7.ವಿಷಯ :-** ಶ್ರೀ ಜಯಚಾಮರಾಜೇಂದ್ರ ಬೋಧಕ ಆಸ್ಪತ್ರೆಯ ಯೂಸರ್ಸ್ ಚಾರ್ಜ್‌ಸ್ ದರವನ್ನು ಶೇ.10 ರಷ್ಟು ಹೆಚ್ಚಿಸುವ ಬಗ್ಗೆ ಹಾಗೂ ಈ ಮೊತ್ತವನ್ನು ಇನ್ನು ಮುಂದೆ ಸಂಸ್ಥೆಯ ನಿರ್ದೇಶಕರ ಲೆಕ್ಕಕ್ಕೆ ಜಮಾ ಮಾಡಲು ಅನುಮೋದಿಸುವ ಬಗ್ಗೆ.

### ಸಂಕ್ಷಿಪ್ತ ವರದಿ

ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆಸ್ಪತ್ರೆಯಲ್ಲಿ ರೋಗಿಗಳಿಂದ ವಸೂಲಿ ಮಾಡುತ್ತಿರುವ ಯೂಸರ್ಸ್ ಚಾರ್ಜ್‌ಸ್ ಈ ಕೂಡ ಲಗತ್ತಿಸಿರುವ ಪಟ್ಟಿಯಂತೆ ಇದ್ದು, ಮಹೆಯಾನ ಸರಾಸರಿ ರೂ. 10,00,000/- ಅಂದಾಜು ಜಮಾ ಆಗಿರುತ್ತದೆ. ವಾರ್ಷಿಕ ಅಂದಾಜು ರೂ 1,20,00,000/- ಜಮಾ ಆಗುತ್ತಿದೆ. ಆದ್ದರಿಂದ ಹೊರ ಹಾಗೂ ಒಳ ರೋಗಿಗಳಿಗೆ ಹೆಚ್ಚಿನ ಸೇವೆ ಸಲ್ಲಿಸಲು ತುರ್ತು ಅವಶ್ಯಕ ವಸ್ತುಗಳನ್ನು ಖರೀದಿಸಲು ಅನುವಾಗುವಂತೆ ಯೂಸರ್ಸ್ ಚಾರ್ಜ್ ಅನ್ನು ಪಟ್ಟಿಯಲ್ಲಿ ಪ್ರಸ್ತಾಪಿಸಿರುವ ವಸ್ತುಗಳಿಗೆ ತಲಾ ಶೇ. 10 ರಷ್ಟು ಮೊತ್ತವನ್ನು ಹಚ್ಚಿಸುವ ಬಗ್ಗೆ ಅನುಮೋದನೆಗಾಗಿ ವಿಷಯವನ್ನು ಆಡಳಿತ ಮಂಡಳಿ ಸಭೆಗೆ ಮಂಡಿಸಿದೆ ಮತ್ತು ಪ್ರಸ್ತುತ ಯೂಸರ್ಸ್ ಚಾರ್ಜ್ ಮೊತ್ತವು ಜಿಲ್ಲಾ ಶಸ್ತ್ರಚಿಕಿತ್ಸಕರ ಲೆಕ್ಕಕ್ಕೆ ಜಮಾ ಆಗುತ್ತಿದ್ದು ಮತ್ತು ವೈದ್ಯಕೀಯ ಅಧೀಕ್ಷಕರು ಸದರಿ ವೆಚ್ಚವನ್ನು ನಿರ್ವಹಿಸುತ್ತಿರುತ್ತಾರೆ. ಪರಿಷ್ಕೃತ ನಿಯಮದಂತೆ ಸಂಸ್ಥೆಯಲ್ಲಿ ಜಿಲ್ಲಾ ಶಸ್ತ್ರಚಿಕಿತ್ಸಕರ ಹುದ್ದೆ ಇಲ್ಲದಿರುವುದರಿಂದ ಹಾಗೂ ಬೋಧಕ ಆಸ್ಪತ್ರೆಯು ನಿರ್ದೇಶಕರ ಆಡಳಿತಕ್ಕೆ ಒಳಪಡುವುದರಿಂದ ಬೈಲಾದ ಕ್ರ.ಸಂ. 24(2) ನಿಯಮಾನುಸಾರ ಯೂಸರ್ಸ್ ನಿಧಿಯು ಸಂಸ್ಥೆಯ ಲೆಕ್ಕಕ್ಕೆ ಜಮಾ ಆಗಬೇಕಾಗಿರುತ್ತದೆ. ಆದ್ದರಿಂದ ಸದರಿ ಮೊತ್ತವನ್ನು ಸಂಸ್ಥೆಯ ನಿಧಿಗೆ ಜಮಾ ಮಾಡಿ ವೆಚ್ಚವನ್ನು ಸಹ ಸಂಸ್ಥೆಯ ಆರ್ಥಿಕ ಸಲಹೆಗಾರರ ಮೂಲಕ ಖರ್ಚು ವೆಚ್ಚಗಳನ್ನು ನಿರ್ವಹಿಸಲು ಅನುಮೋದನೆ ನೀಡಲು ಕೋರಿದೆ.

**ವಿಷಯ 7 ರ ತೀರ್ಮಾನ**:-ಈ ವಿಷಯದಲ್ಲಿ ಸರ್ಕಾರದ ಮಟ್ಟದಲ್ಲಿ ಒಂದು ಏಕರೂಪ ನಿಯಮ ರೂಪಿಸುತ್ತಿದ್ದು, ಆ ನಿಯಮ ಬರುವವರೆಗೂ ಈಗಿರುವಂತೆಯೇ ಮುಂದುವರೆಸಿಕೊಂಡು ಹೋಗಲು ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳಲಾಯಿತು.

**8.ವಿಷಯ :-** ಹಿಮ್ಸ್ ಸಂಸ್ಥೆಯಲ್ಲಿ ಖಾಯಂ ನೇಮಕಾತಿ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಸಿಬ್ಬಂದಿಯವರಿಗೆ ಸ್ನಾತಕೋತ್ತರ ಪದವಿಯನ್ನು ವ್ಯಾಸಂಗ ಮಾಡಲು ಸರ್ಕಾರಿ ಸೀಟ್ ದೊರೆತಿದ್ದು, 9ನೇ ಆಡಳಿತ ಮಂಡಳಿಯ ಸಭೆಯಲ್ಲಿ ಅಸಾಧಾರಣ ರಜೆ (Extra Ordinary Leave) ರಜೆ ನೀಡಲು ಅನುಮತಿ ನೀಡಿದ್ದು, ಸದರಿಯವರು ಕೋರುತ್ತಿರುವ ವೇತನದ ಬಗ್ಗೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ.

ನಿರ್ದೇಶಕರ ಕಛೇರಿ * ಹಿಮ್ಸ್, ಹಾಸನ *

**ಸಂಕ್ಷಿಪ್ತ ವರದಿ**

| ಕ್ರ.ಸಂ. | ವೈದ್ಯರ ಹೆಸರು | ವ್ಯಾಸಂಗಕ್ಕೆ ದೊರೆತಿರುವ ವಿಷಯ |
|---|---|---|
| 01 | ಡಾ. ಎನ್. ಸತೀಶ್ ಬಾಬು, ಹಿರಿಯ ಸ್ಥಾನೀಯ ವೈದ್ಯರು, ಇ.ಎನ್.ಟಿ.ವಿಭಾಗ | M.S. (ENT) |
| 02 | ಡಾ. ಮನೋಹರ್.ಎಸ್.ಆರ್., ಹಿರಿಯ ಸ್ಥಾನೀಯ ವೈದ್ಯರು, ಇ.ಎನ್.ಟಿ.ವಿಭಾಗ | M.S. (Surgery) |
| 03 | ಡಾ\|\| ರಾಜಣ್ಣ. ಬಿ., ಸಹ ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ | MCH-Urology |
| 04 | ಡಾ\|\| ಬಸವರಾಜ್ ಸಹಾಯಕ ಪ್ರಾಧ್ಯಾಪಕರು, ಶಸ್ತ್ರ ಚಿಕಿತ್ಸಾ ವಿಭಾಗ | Fellowship in surgical Gstroenterology |

9ನೇ ಆಡಳಿತ ಮಂಡಳಿಯ ಸಭೆಯಲ್ಲಿ ಸ್ನಾತಕೋತ್ತರ ಪದವಿ ಕೋರ್ಸ್ ವ್ಯಾಸಂಗ ಮಾಡಲು ತೆರಳಿರುವ 4 ಜನ ವಿವಿಧ ಪ್ರಾಧ್ಯಾಪಕರುಗಳಿಗೆ ವೇತನ ರಹಿತ ರಜೆಯನ್ನು ನೀಡಿ ಬೋಧನಾ ಶುಲ್ಕವನ್ನು (Stifand) ಪಡೆದುಕೊಳ್ಳಲು ಅನುಮೋದನೆ ನೀಡಲಾಗಿದ್ದಿತು. ಸದರಿ ಪ್ರಾಧ್ಯಾಪಕರುಗಳು ಇತರೆ ಸರ್ಕಾರಿ ಕಾಲೇಜು ಹಾಗೂ ಸಂಸ್ಥೆಗಳಂತೆ ವೇತನವನ್ನು ನೀಡಲು ಕೋರಿದ್ದು, ಈ ವಿಷಯದಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲು ಕೋರಿದೆ.

**ವಿಷಯ 8 ರ ತೀರ್ಮಾನ**:- ಸರ್ಕಾರದ ಇತರೆ ಕಾಲೇಜು ಮತ್ತು ಸಂಸ್ಥೆಗಳಲ್ಲಿ ಯಾವ ರೀತಿ ಕ್ರಮ ಕೈಗೊಳ್ಳಲಾಗುತ್ತಿದೆಯೋ ಅದೇ ರೀತಿ ಇವರುಗಳಿಗೂ ಸಹ ವೇತನ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.

**9.ವಿಷಯ :-** ಕರ್ನಾಟಕ ರಾಜ್ಯ ಸಹಕಾರಿ ಗ್ರಾಹಕರ ಮಹಾ ಮಂಡಳಿ ನಿಯಮಿತ, ಬೆಂಗಳೂರು ಇವರು ಆಸ್ಪತ್ರೆಯ ಆವರಣದಲ್ಲಿ ಜನತಾ ಬಜಾರ್ ಔಷಧಿ ಮಳಿಗೆ ಪ್ರಾರಂಭಿಸಲು ಸ್ಥಳಾವಕಾಶ ಕೋರಿರುವ ಬಗ್ಗೆ.

**ಸಂಕ್ಷಿಪ್ತ ವರದಿ**

ಅಧ್ಯಕ್ಷರು, ಕರ್ನಾಟಕ ರಾಜ್ಯ ಸಹಕಾರಿ ಗ್ರಾಹಕರ ಮಹಾ ಮಂಡಳಿ ನಿಯಮಿತ, ಬೆಂಗಳೂರು ಇವರು ಹಿಮ್ಸ್ ಆಸ್ಪತ್ರೆಯ ಆವರಣದಲ್ಲಿ ಜನತಾ ಬಜಾರ್ ಔಷಧಿ ಮಳಿಗೆ ಪ್ರಾರಂಭಿಸಲು ಸ್ಥಳಾವಕಾಶ ಕೋರಿರುತ್ತಾರೆ. ಈ ವಿಷಯವನ್ನು ದಿನಾಂಕ:07-12-2010 ರಂದು ನಡೆದ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಸಂಸ್ಥೆಯ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ತೀರ್ಮಾನಿಸಲಾಗಿದೆ.

ಸಂಸ್ಥೆಯ ಆಸ್ಪತ್ರೆಯ ಪೂರ್ವ ದಿಕ್ಕಿನ ದ್ವಾರದ ಕಡೆ ಖಾಲಿ ಜಾಗ ಇದ್ದು, ಈ ಜಾಗವನ್ನು ಜನತಾ ಬಜಾರ್‌ಗೆ ನ್ಯಾಯಯುತ ಬಾಡಿಗೆ (ಲೋಕೋಪಯೋಗಿ ಇಲಾಖೆಯಿಂದ ಪರಿಶೀಲಿಸಿ) ನಿಗದಿ ಮಾಡಿ ನೀಡಿದ್ದಲ್ಲಿ ಆಸ್ಪತ್ರೆಲ್ಲಿ ದೊರೆಯದ ಔಷಧಿಗಳನ್ನು ಆಸ್ಪತ್ರೆಯ ಒಳ ಹಾಗೂ ಹೊರ ರೋಗಿಗಳು ಅತಿ ಸನಿಹದಲ್ಲಿ ಪಡೆಯಲು ಅನುಕೂಲವಾಗುತ್ತದೆ. ಆದ್ದರಿಂದ ಜನತಾ ಬಜಾರ್‌ಗೆ ಔಷಧ ವ್ಯಾಪಾರ ನಡೆಸಲು ಸ್ಥಳಾವಕಾಶ ನೀಡಲು ಅನುಮತಿ ಕೋರಿದೆ.

**ವಿಷಯ 9 ರ ತೀರ್ಮಾನ**:- ಈ ವಿಷಯವನ್ನು ಸಧ್ಯಕ್ಕೆ ಕೈಬಿಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

**10.ವಿಷಯ :-** ಹಾಸನ ಜಿಲ್ಲಾ ತೋಟಗಾರಿಕಾ ಬೆಳೆಗಾರರ ಮಾರಾಟ ಸಹಕಾರ ಸಂಘ, ನಿಯಮಿತ, ಹಾಸನ ಇವರು ಸಂಸ್ಥೆಯ ಆಸ್ಪತ್ರೆಯ ಆವರಣದಲ್ಲಿ ಹಣ್ಣಿನ ಮಾರಾಟ ಮಾಡಲು ಸ್ಥಳಾವಕಾಶ ಕೋರಿರುವ ಬಗ್ಗೆ.

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

## ಸಂಕ್ಷಿಪ್ತ ವರದಿ

ಹಾಸನ ಜಿಲ್ಲಾ ತೋಟಗಾರಿಕಾ ಬೆಳೆಗಾರರ ಮಾರಾಟ ಸಹಕಾರ ಸಂಘ, ನಿಯಮಿತ, ಹಾಸನ ಇವರು ಸಂಸ್ಥೆಯ ಆಸ್ಪತ್ರೆಯ ಆವರಣದಲ್ಲಿ ಹಣ್ಣಿನ ಮಾರಾಟ ಮಾಡಲು ಸ್ಥಳಾವಕಾಶ ಕೋರಿರುತ್ತಾರೆ. ಈ ವಿಷಯವನ್ನು ದಿನಾಂಕ: 07-12-2010 ರಂದು ನಡೆದ ಆರೋಗ್ಯ ರಕ್ಷಾ ಸಮಿತಿ ಸಭೆಯಲ್ಲಿ ಪ್ರಸ್ತಾವನೆಯನ್ನು ಹಿಮ್ಸ್‌ನ ಆಡಳಿತ ಮಂಡಳಿಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ತೀರ್ಮಾನಿಸಲಾಗಿದೆ.

ಹಣ್ಣಿನ ವ್ಯಾಪಾರಕ್ಕಾಗಿ ಸಂಸ್ಥೆಯ ಕಾಂಪೌಂಡಿನ ಒಳಗಡೆ ಸೂಕ್ತವಾದ ಜಾಗವನ್ನು ಮನವಿದಾರರೊಂದಿಗೆ ಪರಿಶೀಲಿಸಿ ಆಸ್ಪತ್ರೆಯ ಒಳ ಹಾಗೂ ಹೊರ ರೋಗಿಗಳಿಗೆ ಅನುಕೂಲವಾಗುವಂತಹ ಜಾಗವನ್ನು ಆಯ್ಕೆ ಮಾಡಿ ಚದರ ಅಡಿ ಒಂದಕ್ಕೆ ನಿಗದಿಪಡಿಸಬಹುದಾದ ದರವನ್ನು ಲೋಕೋಪಯೋಗಿ ಇಲಾಖೆಯಿಂದ ನಿರ್ಧರಿಸಿ ನೀಡುವ ಬಗ್ಗೆ ಅನುಮತಿ ನೀಡಲು ಕೋರಿದೆ.

**ವಿಷಯ 10 ರ ತೀರ್ಮಾನ**:- ಈ ವಿಷಯವನ್ನು ಸಧ್ಯಕ್ಕೆ ಕೈಬಿಡುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ಇತರೆ ಯಾವುದೇ ವಿಷಯಗಳು ಚರ್ಚೆಯಲ್ಲಿ ಇಲ್ಲದೇ ಇದ್ದುದ್ದರಿಂದ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ASPrasad

ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು,
ಆಡಳಿತ ಮಂಡಳಿ, ಹಿಮ್ಸ್, ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ವೈದ್ಯಕೀಯ ಶಿಕ್ಷಣ ಇಲಾಖೆ,
ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ
ಉಪಾಧ್ಯಕ್ಷರು, ಆಡಳಿತ ಮಂಡಳಿ, ಹಿಮ್ಸ್, ಹಾಸನ.

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ, ಹಿಮ್ಸ್, ಹಾಸನ.